ಅನಿರೀಕ್ಷತವಾಗಿ ಶಾಲೆ ರಸ್ತೆಯಲ್ಲಿ ಭೇಟಿಯಾದ. "ನಿಮ್ಮನೆಗೇ ಹೊರಟಿದ್ದೆ" ಎಂದವನು ಮಂಜಾಚಾರಿಯನ್ನು ಮಂಚಿಕೇರಿಯ ಸಂತೆ ಪೇಟೆಯಲ್ಲಿ ತಾನು ನೋಡಿರುವುದಾಗಿಯೂ ರಸ್ತೆಯ ಪಕ್ಕದಲ್ಲಿ ಜನ ಸಾಲಲ್ಲಿ ನಿಂತು ಹತ್ಯಾರಗಳಿಗೆ ಹದ ಹಾಕಿಸಿಕೊಂಡು ಹೋಗುತ್ತಿರುವುದಾಗಿಯೂ ಸುದ್ದಿ ಹೇಳಿದ. ನನ್ನ ಆಸೆಗೆ ಮರು ಜೀವ ಬಂತು.

ಮಂಚಿಕೇರಿಯಲ್ಲಿ ಮಂಜಾಚಾರಿಯ ಕ್ಯಾಂಪ್ ಹುಡುಕಲು ಕಷ್ಟವಾಗಲಿಲ್ಲ. ಸಂತೆ ಪೇಟೆಯ ಮುರ್ಕಿಯಲ್ಲಿ ಮರದ ನೆರಳ ಕೆಳಗೆ ಕುಲುಮೆ ಹಾಕಿದ್ದ. ಎದುರಿಗೆ ಮರದ ಬೊಡ್ಡೆಯ ಮೇಲೆ ಕುಳಿತು ಅವನ ಹೆಂಡತಿ ಕುಲುಮೆಗೆ ಜೋಡಿಸಿದ ಗಳದ ತುದಿಯಿಂದಿಳಿದ ದಾರವನ್ನು ಲಯಬದ್ಧವಾಗಿ ಎಳೆಯುತ್ತ ಒಲೆಗೆ ಗಾಳಿಯನ್ನು ಊದುತ್ತಿದ್ದಳು. ಮಣೆಯ ಮೇಲೆ ಕುಳಿತು ಆಚಾರಿ ಜ್ವಲಿಸುವ ಕೆಂಡದಲ್ಲಿ ಕಾಯಿಸಲಿಟ್ಟ ಕೆಂಪನೆಯ ಹತ್ಯಾರ ಹೊರಗೆ ತೆಗೆದು ಚಪ್ಪಟೆ ಕಲ್ಲಿನ ಮೇಲಿಟ್ಟು ತದೇಕ ಚಿತ್ತದಿಂದ ಜಪ್ಪುತ್ತಿದ್ದ. ಸರತಿಯ ಸಾಲಿನಲ್ಲಿದ್ದ ಜನರು ಒಲೆಯ ಮುಂದೆ ಸಣಬಿನ ಚೀಲದಲ್ಲಿ ಕಟ್ಟಿಟ್ಟ ಹತ್ಯಾರಗಳನ್ನು ಇಟ್ಟು ತಮ್ಮ ಪಾಳಿ ಕಾಯುತ್ತ ಅಲ್ಲಲ್ಲಿ ನೆರಳು ಬಿದ್ದಲ್ಲಿ ವಿರಾಮ ಕೂತು ಕವಳ ಮೆಲ್ಲುತ್ತ ಹರಟುತ್ತ ಇದ್ದರು. ತಮ್ಮ ತಮ್ಮ ಹತ್ಯಾರಗಳನ್ನು ಜತನದಿಂದ ಕಾಪಾಡಿಕೊಂಡ ದಿನಗೂಲಿಗಳು, ಅರಣ್ಯ ಇಲಾಖೆಯ ನರ್ಸರಿ ಕೆಲಸದವರು, ಸಮವಸ್ತ್ರದ ವಿದ್ಯುತ್ ನೌಕರರು ಕಾಯುತ್ತಿದ್ದರು. ರಸ್ತೆಯ ಪಕ್ಕದಲ್ಲಿ ಸ್ವಲ್ಪ ಸಮಯ ನಿಂತು ಮಂಜಾಚಾರಿಯ ಗಮನಕ್ಕೆ ಬರಲು ಸಾಧ್ಯವಿಲ್ಲವೆಂದು ಅನಿಸಿ ಕಾಲು ಸೋತು ನಾನು ರಸ್ತೆಯ ಚಾದಂಗಡಿಯ ಬಾಂಕಿನ ಮೇಲೆ ಕುಳಿತೆ. ಕೌಂಟರ್‌ನಲ್ಲಿ ಕುಳಿತು ಅರ್ಧ ಎಳೆದ ಡ್ರಾವರ ಒಳಗೆ ಕೈ ಹಾಕಿ ನಾಣ್ಯದೊಂದಿಗೆ ಆಟ ಆಡುತ್ತಿದ್ದ ಅಂಗಡಿಯ ಮಾಲೀಕ ನನ್ನ ಮೇಜಿನ ಮೇಲೆ ನೀರಿನ ಲೋಟ ಇಟ್ಟು,"ಕತ್ತಿ ಏನಾದ್ರೂ ತಂದಿದ್ರೆ ಪಾಳೀಲಿ ಇಟ್ಟು ಬನ್ನಿ" ಎಂದು

